ಕುಯ್ದು ಉಜ್ಗಲ್ಲಮ್ಮನ ಭಾನ ಮಾಡುವುದೂ ರೂಢಿಯಲ್ಲಿತ್ತು. ಈ ಎಲ್ಲಾ ಭೂಷಣಗಳಿಂದಾಗಿ ಬಚ್ಗಲ್ಲೂರಿಗೆ ತಾನು ಹೊಂದಿರುವ ಹೆಸರು ಅನ್ವರ್ಥವಾಗಿ ಒಪ್ಪತಕ್ಕದ್ದೇ ಆಗಿತ್ತು.

ಇಂಥ ಬಚ್ಗಲ್ಲೂರು ಗುಡ್ಡವನ್ನು ಇಲ್ಲಿರುವ ವಡ್ಡರು ತಮ್ಮ ಶಕ್ತ್ಯಾನುಸಾರ ಭಾಗ ಮಾಡಿಕೊಂಡು ಅದರಲ್ಲಿ ಬರುವ ಚಪ್ಪಡಿಗಳನ್ನು ಎಬ್ಬಿ ಇಲ್ಲವೆ ಕಲ್ಲುಗಳನ್ನು ಕುಟ್ಟಿ ಪುಡಿ ಮಾಡಿ ಬೇಬಿ ಜೆಲ್ಲಿ, ಬಟಾಣಿ ಜೆಲ್ಲಿ, ಎಮ್ ಸ್ಯಾಂಡ್ ಇತ್ಯಾದಿಯಾಗಲು ಯಾರೊ ಗುತ್ತಿಗೆದಾರನಿಗೆ ನೆರವಾಗುತ್ತಿದ್ದರೆ, ಕೆಂಪಣ್ಣನ ಅಪ್ಪ ಉಜ್ಗಲ್ ಬಸವ ಆ ಗುಡ್ಡದ ಇನ್ನೊಂದು ಮಗ್ಗುಲಿಂದ ಸಿಗುವ ಅಥವ ವಡ್ಡರು ಚಪ್ಪಡಿ ಎಬ್ಬುವಾಗ ಅದರಿಂದ ಸಿಡಿದು ಬರುವ ಸಣ್ಣ ಸಣ್ಣ ಹಿಡಿಗಾತ್ರದ ಪೀಸುಗಲ್ಲುಗಳನ್ನು ಆದುಕೊಂಡು ಉಜ್ಜಿ ನುಣುಪಾಗಿಸಿ ಒಂದು ಹದಕ್ಕೆ ತಂದು ಅವುಗಳನ್ನೆಲ್ಲ ಒಂದು ಚೀಲಕ್ಕೆ ತುಂಬಿಕೊಂಡು ಸೈಕಲ್ ಮೇಲೆ 'ಉಜ್ಗಲ್ ಬೇಕ ಉಜ್ಗಲ್ಲು, ಬಚ್ಗಲ್ಲೂರಿನ ಉಜ್ಗಲ್ಲು' ಎಂದು ಊರೂರ ಮೇಲೆ ಮಾರಿಕೊಂಡು ಹೋಗುತ್ತಿದ್ದನು. ಬಚ್ಗಲ್ಲೂರಿನ ಉಜ್ಗಲ್ಲು ಎಂದಾಕ್ಷಣ ತಡೆದು ನಿಲ್ಲಿಸುತ್ತಿದ್ದ ಹಳ್ಳಿಗರು ಅದರಲ್ಲೆ ಒಂದು ಚಂದ ಎನಿಸುವುದನ್ನ ಐದ್ರುಪಾಯಿ ಹತ್ರುಪಾಯಿ ಕೊಟ್ಟು ತೆಗೆದುಕೊಳ್ಳುತ್ತಿದ್ದರು. ಹೀಗೆ ದುಡ್ಡುಕೊಟ್ಟು ಉಜ್ಗಲ್ ತೆಗೆದುಕೊಳ್ಳುವುದಕ್ಕೂ ಪೂರ್ವದಲ್ಲಿ ಊರೂರ ಹಿರಿ ತಲೆಗಳು ದೂರದಲ್ಲೆ ಉಜ್ಗಲ್ ಬಸವನ ದನಿ ಕೇಳಿ ಅಂಗಿ ಕಳಚಾಕಿ ಹಟ್ಟಿಮುಂದೆ ನೀರುಯ್ಕಣಕೆ ಕುಕಣರು. ಉಜ್ಗಲ್ ಬಸವ ತನ್ನ ವ್ಯಾಪಾರ ನಿಮಿತ್ತ ಬಳಸುತ್ತಿದ್ದ ಉಪಮೆಗಳಾದ 'ಮೈಕೈ ನೋವು, ನರಬಿಗಿತ, ಹಳೆ ಉಣುಕು, ಸಂದಿವಾತ ಇರರು ಬಿರಿನ ಬನ್ನಿ ಬಚ್ಗಲ್ಲೂರ ಉಜ್ಗಲ್ ಬಂದೈತೆ' ಎಂದು ಕೂಗುತ್ತಿದ್ದುದನ್ನು ಪರೀಕ್ಷಿಸಲೆಂಬಂತೆ 'ಲೆ ಬರ್ಲ ಬಸ್ವ ಇಲ್ಲಿ, ಉಜ್ಗಲ್ ತರ್ಲ' ಎಂದು ಬೆನ್ನು ತೋರಿಸುತ್ತಿದ್ದರು. ಆಗ ಬಸ್ವ ತನ್ನ ಚೀಲದಿಂದ ಅವರವರ ಮೈಯ್ಯ ವರಸೆಗೆ ತಕ್ಕಂತ ಒಂದು ಉಜ್ಗಲ್ ತೆಗೆದು ಅದರಿಂದ ಅವರ ಬೆನ್ನನ್ನು ಉಜ್ಜಿ, ರೋಸ ತೆಗೆದು ಮೈ ಹಗುರಾಗಿಸುತ್ತಿದ್ದ. ನೀರೊಲೆ ಮಗ್ಗಲ್ಲಿ ಕೂತು ಬೆನ್ನುಜ್ಜಿಸ್ಕಂತಿದ್ದ ಹಳೆ ಘಟಗಳು 'ಆ, ಊ, ಅಲ್ಲಿ, ಇಲ್ಲಿ, ಮೇಲೆ, ಕೆಳಗೆ' ಎಂದು ಮುಸುಗುಡುತ್ತ ಸಮಯದ ಪರಿವೆ ಇಲ್ಲದಂತೆ ಲೀಲಾಜಾಲವಾಗಿ ಮೈ ಬಾರ ಇಳಿಸಿಕೊಳ್ಳುತ್ತಿದ್ದರು. ಬಸವನೂ ಅಷ್ಟೆ ಅವರು ಸಾಕು ಎನ್ನುವವರೆಗೂ ತನಗೆ ಗೊತ್ತಿರುವ ವಿದ್ಯೆಯನ್ನೆಲ್ಲ ಬಳಸಿ ಬೆನ್ನುಜ್ಜುತ್ತಿದ್ದನು. ಉಜ್ಗಲ್ ಬಸ್ವ ಈ ಮೂಲೆಯಲ್ಲಿ ಬೆನ್ನುಜ್ಜುತ್ತಿರುವುದು ಕಂಡು ಆ ಮೂಲೆಯ ಇನ್ನೊಂದು ಘಟ ತಾನೂ ಅಂಗಿ ಕಳಚಾಕಿ ಮೈ ನೆನೆಸಿಕೊಂಡು ಬಸವನ ಬರುವಿಗಾಗಿ ಕಾದಿರುತ್ತಿತ್ತು.

ಎಷ್ಟೊತ್ತು ಉಜ್ಜಿದರೂ ಬೆನ್ನು ಅಲ್ಲಿ ಕಿತ್ತೈತೆ, ಇಲ್ಲಿ ತರಚಿಕಂಡೈತೆ ಅಂತ ಎಂದೂ ಯಾರೂ ದೂರಿದ್ದಿಲ್ಲ. 'ಉಜ್ಗಲ್ ಬಸವನ ಬೆನ್ನುಜ್ಜು ಅಂದರೆ ಒಂದ್ವಾರಲ್ಲ ಎರಡ್ವಾರ ಬೇಕಾರೆ ತಡಿಯುತ್ತೆ' ಎಂದು ಊರ ಮುಂದಲ ಅಳ್ಳಿ ಮರ್ದಡಿ ಕೂತು ಮಾತಾಡುತ್ತಿದ್ದರು. ತಾನು ಉಜ್ಗಲು ಬಳಸಿದ ಕಲ್ಲನ್ನೇ ಅವರವರ ಬೆನ್ನಿಗೆ ಹೊಂದಿಸಿ ಅವರು ಕೊಟ್ಟ ಕಾಯಿನೊ, ಸೇರು ರಾಗಿನೊ ಇಸಿದುಕೊಂಡು ಮುಂದಕ್ಕೋಗುತ್ತಿದ್ದ.

ಕೆಲವು ಮನೆಯ ಹಿರಿ ತಲೆಗಳಿಗೆ ಅವರ ಮಕ್ಕಳು ಸೊಸೆಯಂದಿರು ಬೆನ್ನುಜ್ಜುವುದನ್ನೇ ಬಿಟ್ಟಿದ್ದರು. ಉಜ್ಗಲ್ ಬಸವನಿಗೆ ರೂಢಿಯಾಗಿದ್ದ ಬೆನ್ನುಗಳು ಇನ್ಯಾರೆ ಉಜ್ಜಿದರೂ ಸಂತುಷ್ಟವಾಗುತ್ತಿರಲಿಲ್ಲ. ಅದಕಂಡು 'ನೀವು ನೀರುಯ್ಕಣಕೆ ಕುಕಣದಾದ್ರೆ ಉಜ್ಗಲ್ ಬಸ್ವ ಬರದ್ನ ನೋಡ್ಕೆಂಡು ಕುಕಳ್ರಿ, ಸುಮ್ನೆ ನಮ್ ಪ್ರಾಣ ತಿನ್ಬೇಡ್ರಿ' ಎಂದು ಹೆಂಗಸರುಗಳು ಮೂದಲಿಸುತ್ತಿದ್ದರು. ಇದಕಂಡು ಊರೂರ ಹಳೆ ಘಟಗಳು ನೀರುಯ್ಕಣಕೆ ಎಂದು ಶನಿವಾರವನ್ನೆ ಹೆಚ್ಚು ಕಮ್ಮಿ ಖಾಯಂ ಮಾಡಿಕೊಂಡಿದ್ದರು. ಬಸವನೂ ಅಷ್ಟೆ, ಎಷ್ಟೆ ಕಷ್ಟ ಆದ್ರು ಆದಿನ ಮಾತ್ರ ತನಗಾಗಿ ಕಾದಿರುವವರ ಊರುಗಳಿಗೆ ಹೋಗೇ ತೀರುತ್ತಿದ್ದನು.

ಉಜ್ಗಲ್ ಬಸವನ ಮಗ ಕೆಂಪ ತಾನೂ ತನ್ನ ಬಾಲ್ಯದಲ್ಲಿ ಅಪ್ಪನ ಜೊತೆಗೂಡಿ ಊರೂರ ಮೇಲೆ ಹೋಗುತ್ತಿದ್ದನು. ಕಾರಣ ಅಪ್ಪನ ಸೈಕಲ್ ಆದಿನ ಕಾಯಿ ಕಸರುಗಳಿಂದ ತುಂಬಿ ಹೋಗುತ್ತಿತ್ತು. ದೂಕಿಕೊಂಡು ಬರಲು ಇಲ್ಲವೆ ಒಂದೆರೆಡು ಚೀಲಗಳನ್ನು ಹೆಗಲಿಗೇರಿಸಿಕೊಂಡು ಬರಲು ಬಸವ ತನ್ನ ಒಬ್ಬನೇ ಮಗನನ್ನು ಶನಿವಾರದ ಹೊತ್ತು ಕರೆದುಕೊಂಡು ಹೋಗುತ್ತಿದ್ದನು. ಬಸವನ ಮಗ